**1.ಕಲಿಕಾಫಲವಾರು ಅಂಕ ಹಂಚಿಕೆ** **5th 1st sem ಪರಿಸರ ಅಧ್ಯಯನ 2. ಉದ್ದೇಶವಾರು ಅಂಕ ಹಂಚಿಕೆ**

| ಕ್ರ. ಸಂ | ಕಲಿವಿನ ಫಲಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸಜೀವಿ ಮತ್ತು ನಿರ್ಜೀವಿ ವಸ್ತುಗಳನ್ನು ಗುರುತಿಸುವರು ಹಾಗೂ ಜೀವಿಗಳ ಪ್ರಮುಖ ಲಕ್ಷಣಗಳನ್ನು ತಿಳಿಯುವರು. | 2 | 3 | 15 |
| 2 | ಆಹಾರ ಸೇವನೆಯ ಆಧಾರದ ಮೇಲೆ ಪ್ರಾಣಿಗಳನ್ನು ವಿಂಗಡಿಸುವರು. | 2 | 3 | 15 |
| 3 | ಸಸ್ಯ ಮತ್ತು ಪ್ರಾಣಿಗಳ ಸಂರಕ್ಷಣೆಯ ಮಹತ್ವ ತಿಳಿಯುವರು. | 1 | 2 | 10 |
| 4 | ಕುಟುಂಬದಲ್ಲಿನ ಸಂಬಂಧಗಳನ್ನು ಗುರುತಿಸುವರು. | 1 | 3 | 15 |
| 5 | ಕುಟುಂಬದ ವಿಧಗಳನ್ನು ಅರ್ಥಮಾಡಿಕೊಳ್ಳುವರು. | 1 | 2 | 10 |
| 6 | ಸಮುದಾಯದ ಲಕ್ಷಣಗಳು ಹಾಗೂ ವಿಧಗಳನ್ನು ಗುರುತಿಸುವರು, ವಿವಿಧ ಕೆಲಸಗಳಅಗತ್ಯತೆ ವೃತ್ತಿ ಗೌರವವನ್ನು ಪ್ರಶಂಸಿಸುವರು. | 3 | 4 | 20 |
| 7 | ಕ್ರೀಡೆಗಳ ಮತ್ತು ವ್ಯಾಯಾಮಗಳ ಪ್ರಾಮುಖ್ಯತೆಯನ್ನು ಪ್ರಶಂಸಿಸುವರು. | 2 | 3 | 15 |
| | ಒಟ್ಟು | 12 | 20 | 100 |

| ಕ್ರ. ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 3 | 3 | 15 |
| 2 | ತಿಳಿವಳಿಕೆ | 4 | 6 | 30 |
| 3 | ಅಭಿವ್ಯಕ್ತಿ /ಅನ್ವಯ | 4 | 8 | 40 |
| 4 | ಪ್ರಶಂಸೆ/ಕೌಶಲ | 1 | 3 | 15 |
| | ಒಟ್ಟು | 12 | 20 | 100% |

**3. ಪ್ರಶ್ನಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಠ ಪ್ರಶ್ನೆ | 5 | 5 | 25 |
| 2 | ಕಿರು ಉತ್ತರ ಪ್ರಶ್ನೆ | 6 | 12 | 60 |
| 3 | ದೀರ್ಘ ಉ. ಪ್ರಶ್ನೆ | 1 | 3 | 15 |
| | ಒಟ್ಟು | 12 | 20 | 100% |

**4. ಕಠಿಣತಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸರಳ | 6 | 7 | 35 |
| 2 | ಸಾಧಾರಣ | 4 | 8 | 40 |
| 3 | ಕಠಿಣ | 2 | 5 | 25 |
| | ಒಟ್ಟು | 12 | 20 | 100% |

# ನೀಲನಕಾಶೆ

| ಕ್ರ. ಸಂ | ಉದ್ದೇಶಗಳು ಕಲಿವಿನ ಫಲಗಳು | ಜ್ಞಾನ | | | ತಿಳಿವಳಿಕೆ | | | ಅಭಿವ್ಯಕ್ತಿ/ಅನ್ವಯ | | | ಪ್ರಶಂಸೆ/ಕೌಶಲ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ಪ್ರಶ್ನೆ | ಅಂಕ |
| **1** | **ಕಲಿವಿನ ಫಲ 1** | 1(1) | | | 1(1) | | | | 1(2) | | | | | 3 | 4 |
| **2** | **ಕಲಿವಿನ ಫಲ 2** | | | | | 1(2) | | | | | | | | 1 | 2 |
| **3** | **ಕಲಿವಿನ ಫಲ 3** | | | | | | | | 1(2) | | | | | 1 | 2 |
| **4** | **ಕಲಿವಿನ ಫಲ 4** | | | | | | | | | | | | 1(3) | 1 | 3 |
| **5** | **ಕಲಿವಿನ ಫಲ 5** | | | | | 1(2) | | | | | | | | 1 | 2 |
| **6** | **ಕಲಿವಿನ ಫಲ 6** | 1(1) | | | 1(1) | | | | 1(2) | | | | | 3 | 4 |
| **7** | **ಕಲಿವಿನ ಫಲ 7** | 1(1) | | | | | | | 1(2) | | | | | 2 | 3 |
| | | **3(3)** | | | **2(2)** | **2(4)** | | | **4(8)** | | | | **1(3)** | **12** | |
| | **ಒಟ್ಟು** | **3(3)** | | | **4(6)** | | | **4(8)** | | | **1(3)** | | | | **20** |

**ಸೂಚನೆ :–** 1.ವ= ವಸ್ತುನಿಷ್ಠ ಪ್ರಶ್ನೆ, ಕಿ= ಕಿರುಉತ್ತರ ಪ್ರಶ್ನೆ, ದೀ= ದೀರ್ಘ ಉತ್ತರ ಪ್ರಶ್ನೆ 2.ಪ್ರಶ್ನೆ(ಅಂಕ)

# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, __________,__________ ತಾಲ್ಲೂಕು

ಸಂಕಲನಾತ್ಮಕ ಮೌಲ್ಯಮಾಪನ 1– ಅಕ್ಟೋಬರ್ 2022 ಸಮಯ:45ನಿ

ತರಗತಿ: 5ನೇ ವಿಷಯ: ಪರಿಸರ ಅಧ್ಯಯನ ಅಂಕಗಳು:20

---

**I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ:–** 3X1=3

1. ಕೇವಲ ಸಸ್ಯಗಳು ಮತ್ತು ಸಸ್ಯಗಳ ಉತ್ಪನ್ನಗಳನ್ನು ತಿಂದು ಬದುಕುವ ಜೀವಿಗಳಿಗೆ __________ ಎನ್ನುತ್ತೇವೆ.
2. ಒಂದು ನಿಶ್ಚಿತ ಪ್ರದೇಶದಲ್ಲಿರುವ ಜನರ ಸಮೂಹವನ್ನು __________ಎಂದು ಕರೆಯುತ್ತಾರೆ.
3. ಸಾಹಸ ಕ್ರೀಡೆಗಳಿಗೆ ಒಂದು ಉದಾಹರಣೆ __________

**II. ಆವರಣದಲ್ಲಿ ಸರಿ ಉತ್ತರವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.** 2X1=2

4. ಬುಡಕಟ್ಟು ಸಮುದಾಯದವರು __________ಪ್ರದೇಶಗಳಲ್ಲಿ ವಾಸಿಸುತ್ತಾರೆ.

   (ನಗರ, ಹಳ್ಳಿ, ಕಾಡು, ಮರುಭೂಮಿ)
5. ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳುವ ಹಸಿರು ಸಸ್ಯಗಳೇ __________

   (ಸ್ವಪೋಷಕಗಳು, ಪರಪೋಷಕಗಳು, ಬಳ್ಳಿಗಳು, ವಾರ್ಷಿಕ ಸಸ್ಯಗಳು)

**III. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ :–** 6X2=12

6. ವಾಹನಗಳು ಚಲಿಸಿದರೂ ಕೂಡ ಅವುಗಳನ್ನು ನಿರ್ಜೀವಿಗಳು ಎನ್ನಲು ಕಾರಣವೇನು?

   ______________________________

   ______________________________

   ______________________________
7. ನಿಮಗೆ ಗೊತ್ತಿರುವ ಪ್ರಾಣಿಗಳ ಹೆಸರುಗಳನ್ನು ಪಟ್ಟಿ ಮಾಡಿ, ಆವುಗಳ ಆಹಾರ ಸೇವನೆಯ ಆಧಾರದ ಸಸ್ಯಹಾರಿ,ಮಾಂಸಹಾರಿ ಹಾಗೂ ಮಿಶ್ರಹಾರಿಗಳಾಗಿ ವಿಂಗಡಿಸಿ.

   ______________________________

   ______________________________

| ಸಸ್ಯಹಾರಿ | ಮಾಂಸಹಾರಿ | ಮಿಶ್ರಹಾರಿ |
|---|---|---|
| | | |
| | | |
| | | |

8. ಪರಿಸರವನ್ನು ನಾವು ರಕ್ಷಿಸಿದರೆ, ಅದು ನಮ್ಮನ್ನು ಹೇಗೆ ರಕ್ಷಿಸುತ್ತದೆ ?

   ______________________________

   ______________________________

   ______________________________

   ______________________________

9. ವಿಭಕ್ತ ಮತ್ತು ಅವಿಭಕ್ತ ಕುಟುಂಬದ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

| **ವಿಭಕ್ತ ಕುಟುಂಬ** | **ಅವಿಭಕ್ತ ಕುಟುಂಬ** |
|---|---|
| | |
| | |
| | |
| | |

10. .ನಿಮ್ಮ ಜನವಸತಿ ಪ್ರದೇಶದಲ್ಲಿ ಬಟ್ಟೆ ಹೊಲಿಯುವ ದರ್ಜಿಗಳು ಯಾರೂ ಇಲ್ಲದೇ ಹೋಗಿದ್ದರೆ, ಜನ ಯಾವ ರೀತಿಯ ಕಷ್ಟ ಅನುಭವಿಸಬೇಕಾಗುತ್ತಿತ್ತು ಎಂಬುದನ್ನು ಯೋಚಿಸಿ ಬರೆಯಿರಿ.

11. ಆಟ ಆಡಿ ಗೆದ್ದಾಗ ಅಥವಾ ಸೋತಾಗ ನಿಮಗೆ ಆಗುವ ಅನುಭವಗಳನ್ನು ಬರೆಯಿರಿ.

IV. **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :–** 3

12.ನಿನ್ನ ಕುಟುಂಬದ ವಂಶವೃಕ್ಷ ಬರೆಯಿರಿ

# ಮಾದರಿ ಉತ್ತರ ಪತ್ರಿಕೆ

ಸಂಕಲನಾತ್ಮಕ ಮೌಲ್ಯಮಾಪನ 1– ಅಕ್ಟೋಬರ್ 2022 ಸಮಯ:45ನಿ

ತರಗತಿ: 5ನೇ ವಿಷಯ: ಪರಿಸರ ಅಧ್ಯಯನ ಅಂಕಗಳು:20

---

**I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ:–** 3X1=3

1. ಕೇವಲ ಸಸ್ಯಗಳು ಮತ್ತು ಸಸ್ಯಗಳ ಉತ್ಪನ್ನಗಳನ್ನು ತಿಂದು ಬದುಕುವ ಜೀವಿಗಳಿಗೆ **ಸಸ್ಯಾಹಾರಿಗಳು** ಎನ್ನುತ್ತೇವೆ.
2. ಒಂದು ನಿಶ್ಚಿತ ಪ್ರದೇಶದಲ್ಲಿರುವ ಜನರ ಸಮೂಹವನ್ನು **ಸಮುದಾಯ** ಎಂದು ಕರೆಯುತ್ತಾರೆ.
3. ಸಾಹಸ ಕ್ರೀಡೆಗಳಿಗೆ ಒಂದು ಉದಾಹರಣೆ **ಪರ್ವತ ಕಾಲು ಬಂಡಿ**

**II. ಆವರಣದಲ್ಲಿ ಸರಿ ಉತ್ತರವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.** 2X1=2

4. ಬುಡಕಟ್ಟು ಸಮುದಾಯದವರು **ಕಾಡು** ಪ್ರದೇಶಗಳಲ್ಲಿ ವಾಸಿಸುತ್ತಾರೆ.

   (ನಗರ, ಹಳ್ಳಿ, ಕಾಡು, ಮರುಭೂಮಿ)

5. ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳುವ ಹಸಿರು ಸಸ್ಯಗಳೇ **ಸ್ವಪೋಷಕಗಳು**

   (ಸ್ವಪೋಷಕಗಳು, ಪರಪೋಷಕಗಳು, ಬಳ್ಳಿಗಳು, ವಾರ್ಷಿಕ ಸಸ್ಯಗಳು)

**III. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ :–** 6X2=12

6. ವಾಹನಗಳು ಚಲಿಸಿದರೂ ಕೂಡ ಅವುಗಳನ್ನು ನಿರ್ಜೀವಿಗಳು ಎನ್ನಲು ಕಾರಣವೇನು?
   **ವಾಹನಗಳು ಸ್ವಯಂ ತಾವಾಗಿ ಚಲಿಸದೇ ಚಾಲಕನ ಅವಶ್ಯಕತೆ ಇರುವುದರಿಂದ ಅವುಗಳನ್ನು ನಿರ್ಜೀವಿಗಳು ಎಂದು ಕರೆಯುತ್ತೇವೆ.**

7. ನಿಮಗೆ ಗೊತ್ತಿರುವ ಪ್ರಾಣಿಗಳ ಹೆಸರುಗಳನ್ನು ಪಟ್ಟಿ ಮಾಡಿ, ಆವುಗಳ ಆಹಾರ ಸೇವನೆಯ ಆಧಾರದ ಸಸ್ಯಹಾರಿ,ಮಾಂಸಹಾರಿ ಹಾಗೂ ಮಿಶ್ರಹಾರಿಗಳಾಗಿ ವಿಂಗಡಿಸಿ.
   **ಕಾಗೆ, ಸಿಂಹ, ಹಸು, ಚಿರತೆ, ಜಿಂಕೆ, ನಾಯಿ, ಹದ್ದು, ಬೆಕ್ಕು, ಕೋತಿ, ಆನೆ, ಹುಲಿ,**

| ಸಸ್ಯಹಾರಿ | ಮಾಂಸಹಾರಿ | ಮಿಶ್ರಹಾರಿ |
|---|---|---|
| ಹಸು | ಹುಲಿ | ನಾಯಿ |
| ಜಿಂಕೆ | ಸಿಂಹ | ಬೆಕ್ಕು |
| ಆನೆ | ಚಿರತೆ | ಕಾಗೆ |
| | ಹದ್ದು | ಕೋತಿ |

8. ಪರಿಸರವನ್ನು ನಾವು ರಕ್ಷಿಸಿದರೆ, ಅದು ನಮ್ಮನ್ನು ಹೇಗೆ ರಕ್ಷಿಸುತ್ತದೆ ?
   **ಪರಿಸರವನ್ನು ರಕ್ಷಣೆ ಮಾಡುವುದರಿಂದ ಕಾಲಕಾಲಕ್ಕೆ ಮಳೆಯಾಗುತ್ತದೆ ಮತ್ತು ಜೀವಿಗಳು ಉಸಿರಾಡಲು ಬೇಕಾದಂತಹ ಶುದ್ಧವಾದ ಗಾಳಿ ಸಿಗುತ್ತದೆ. ಭೂಮಿಯ ತಾಪಮಾನ ಸಮತೋಲನ ಸ್ಥಿತಿಯಲಿ ಇರುವಂತೆ ನೋಡಿಕೊಳ್ಳುತ್ತದೆ ಆದ್ದರಿಂದ ಪರಿಸರವನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.**

9. ವಿಭಕ್ತ ಮತ್ತು ಅವಿಭಕ್ತ ಕುಟುಂಬದ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

| ವಿಭಕ್ತ ಕುಟುಂಬ | ಅವಿಭಕ್ತ ಕುಟುಂಬ |
|---|---|
| **ವಿಭಕ್ತ ಕುಟುಂಬದಲ್ಲಿ ಎರಡು ತಲೆಮಾರುಗಳು ಮಾತ್ರ ಇರುತ್ತವೆ** | **ಅವಿಭಕ್ತ ಕುಟುಂಬದಲ್ಲಿ ಎರಡಕ್ಕಿಂತ ಹೆಚ್ಚು ತಲೆಮಾರುಗಳು ಇರುತ್ತವೆ** |
| **ವಿಭಕ್ತ ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಇರುತ್ತದೆ** | **ಅವಿಭಕ್ತ ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಜಾಸ್ತಿ ಇರುತ್ತದೆ** |
| **ವಿಭಕ್ತ ಕುಟುಂಬದಲ್ಲಿ ಉತ್ತಮ ಶಿಕ್ಷಣ, ವೈದ್ಯಕೀಯ ಸೌಲಭ್ಯ, ಉತ್ತಮ ಪೋಷಕಾಂಶಗಳುಳ್ಳ ಆಹಾರ ಸಿಗುತ್ತದೆ** | **ಅವಿಭಕ್ತ ಕುಟುಂಬದಲ್ಲಿ ಈ ಸೌಲಭ್ಯಗಳು ತುಂಬಾ ಕಡಿಮೆ ಪ್ರಮಾಣದಲ್ಲಿ ಸಿಗುತ್ತದೆ** |

10. .ನಿಮ್ಮ ಜನವಸತಿ ಪ್ರದೇಶದಲ್ಲಿ ಬಟ್ಟೆ ಹೊಲಿಯುವ ದರ್ಜಿಗಳು ಯಾರೂ ಇಲ್ಲದೇ ಹೋಗಿದ್ದರೆ, ಜನ ಯಾವ ರೀತಿಯ ಕಷ್ಟ ಅನುಭವಿಸಬೇಕಾಗುತ್ತಿತ್ತು ಎಂಬುದನ್ನು ಯೋಚಿಸಿ ಬರೆಯಿರಿ.

**ಜನರ ಅಗತ್ಯಕ್ಕೆ ತಕ್ಕಂತೆ ಬಟ್ಟೆ ಒಲಿಸಿಕೊಳ್ಳಲು ಸಾಧ್ಯವಾಗದೆ ಪರಿತಪಿಸಬೇಕಾಗುತ್ತದೆ ಅಲ್ಪಸ್ವಲ್ಪ ಹೊಲಿಗೆ ತಿಳಿದಿರುವವರು ಸೂಜಿ ದಾರದ ಸಹಾಯದಿಂದ ಕೈಯಿಂದಲೇ ಬಟ್ಟೆ ಒಲಿದುಕೊಳ್ಳಬೇಕಾಗಬಹುದು ತಮ್ಮ ಜನವಸತಿ ಪ್ರದೇಶಕ್ಕೆ ಹತ್ತಿರವಿರುವ ಬೇರೆ ಪ್ರದೇಶದಲ್ಲಿನ ದರ್ಜಿಗಳಿಂದ ಬಟ್ಟೆ ಒಲಿಸಿಕೊಳ್ಳಬೇಕಾಗುತ್ತದೆ. ಮಾರುಕಟ್ಟೆಗೆ ಹೋಗಿ ಸಿದ್ದ ಉಡುಪುಗಳನ್ನು ಖರೀದಿಸಿ ಧರಿಸಬೇಕಾಗುತ್ತದೆ ಸಿದ್ಧ ಉಡುಪುಗಳು ದುಬಾರಿಯಾದರೆ ಖರೀದಿಸಲಾಗದೆ ನೋವನ್ನು ಅನುಭವಿಸಬೇಕಾಗುತ್ತದೆ ಒಟ್ಟಾರೆ ಒಂದು ಜನವಸತಿ ಪ್ರದೇಶದಲ್ಲಿ ದರ್ಜಿಯ ಅಗತ್ಯತೆ ಇದ್ದೇ ಇರುತ್ತದೆ.**

11. ಆಟ ಆಡಿ ಗೆದ್ದಾಗ ಅಥವಾ ಸೋತಾಗ ನಿಮಗೆ ಆಗುವ ಅನುಭವಗಳನ್ನು ಬರೆಯಿರಿ.
**ಗೆಲುವನ್ನು ಬಹಳ ಸಂಭ್ರಮದಿಂದ ಸ್ವೀಕರಿಸುತ್ತೇನೆ ನನ್ನ ಸಹಪಾಠಿಗಳೆಲ್ಲರೂ ನನ್ನನ್ನು ಪ್ರಶಂಶಿಸುತ್ತಾರೆ. ಗೆಲುವಿನಿಂದ ನಾನು ಉತ್ತೇಜನಗೊಂಡು ಇನ್ನು ಉತ್ತಮವಾಗಿ ಆಡಲು ಅಭ್ಯಾಸ ಮಾಡುವಂತೆ ಪ್ರೇರಣೆ ಸಿಗುತ್ತದೆ. ಸಾಧನೆಯ ಕಡೆಗೆ ಗಮನಹರಿಸಲು ಸ್ಫೂರ್ತಿ ದೊರೆಯುತ್ತದೆ.**
**ಮೊದಲಿಗೆ ಸೋತೆನಲ್ಲ ಎಂದು ಬೇಸರ ಉಂಟಾಗುತ್ತದೆ. ಆದರೆ ನನ್ನ ಶಿಕ್ಷಕರು ಹಾಗೂ ಸಹಪಾಠಿಗಳು ನನಗೆ ಆತ್ಮೀಯತೆಯನ್ನು ತೋರಿಸಿ ಸೋಲೇ ಗೆಲುವಿನ ಸೋಪಾನ ಎಂದು ಹುರಿದುಂಬಿಸಿದಾಗ ನನ್ನಲ್ಲಿ ಛಲ ಉಂಟಾಗಿ ಮತ್ತೆ ಆಡಬೇಕೆಂಬ ಮನೋಭಾವನೆ ಉಂಟಾಗುತ್ತದೆ. ಮುಂದೆಂದೂ ಸೋಲಬಾರದೆಂಬ ಆಟದಿಂದ ಉತ್ತಮವಾಗಿ ಅಭ್ಯಾಸ ಮಾಡಿ ಗೆಲುವು ಪಡೆಯುವಲ್ಲಿ ಶಕ್ತನಾಗಬೇಕೆಂದು ಛಲ ಮೂಡುತ್ತದೆ.**

IV. **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :–** 3

12.ನಿನ್ನ ಕುಟುಂಬದ ವಂಶವೃಕ್ಷ ಬರೆಯಿರಿ

